27.	PHC, Choranur	2	Octo. 90
28.	~~PHC, Raviela~~	1	Jan. 91
29.	PHC, Challagurki	1	Feb. 91
30.	LCDR, Bellary	2	Jan. 90
31.	Medical College Hospital, Bellary.	2	Jan. 90
	Total	34	

ಶ್ರೀ ಕೆ.ವಿ. ರವೀಂದ್ರನಾಥ್ ಬಾಬು : ಮಾನ್ಯ ಅಧ್ಯಕ್ಷರೇ ಬಳ್ಳಾರಿ ಜಿಲ್ಲೆಯಲ್ಲಿ ಆಸ್ಪತ್ರೆಗಳು ಎಷ್ಟಿವೆ ಎಂದು ಕೇಳಿದ್ದಕ್ಕೆ 72 ಆಸ್ಪತ್ರೆಗಳು ಇವೆ ಎಂದು ಮಾನ್ಯ ಸಚಿವೆಯವರು ಉತ್ತರವನ್ನು ಕೊಟ್ಟಿದ್ದಾರೆ. 1988ರಿಂದಲೂ 34 ಡಾಕ್ಟರುಗಳ ಹುದ್ದೆಗಳು ಖಾಲಿ ಇವೆ. ಇದನ್ನು ಯಾವಾಗ ಫಿಲ್ ಅಪ್ ಮಾಡುತ್ತೀರಿ? ಇದರಲ್ಲಿ ಲೇಡಿ ಮೆಡಿಕಲ್ ಆಫಿಸರ್ಸ್ ಮೇಲ್ ಡಾಕ್ಟರ್ಸ್ ಅನ್ನು ಪೋಸ್ಟ್ ಮಾಡಬೇಕು. ಇಷ್ಟು ಮಂದಿಯನ್ನು ಯಾವಾಗ ತುಂಬುತ್ತೀರಿ? ಇದಕ್ಕೆ ಅಂತಿಮವಾಗಿ ಒಂದು ಸಮಯ ನಿಗದಿಯನ್ನು ತಾವುಗಳು ಹೇಳಬೇಕು. ನಮ್ಮ ಪಕ್ಕದ ಜಿಲ್ಲೆಗೆ ವೈದ್ಯೋಪಚಾರಕ್ಕೆ ಹೋಗೋಣ ಅಂದರೆ ಅಲ್ಲಿಯೂ ಕೂಡ ಸೂಕ್ತ ಸೌಲಭ್ಯಗಳು ಇಲ್ಲ. ಇದರಿಂದಾಗಿ ಗ್ರಾಮಾಂತರ ಪ್ರದೇಶಗಳ ಜನರಿಗೆ ತುಂಬಾ ತೊಂದರೆಯಾಗಿದೆ. ಆದುದರಿಂದ ಯಾವಾಗ ಈ ಖಾಲಿಯಾಗಿರುವ ಹುದ್ದೆಗಳನ್ನು ತುಂಬಿ ಜನರಿಗೆ ಅನುಕೂಲ ಮಾಡಿಕೊಡುವಿರಿ ಎಂಬ ಬಗ್ಗೆ ಹೇಳಬೇಕು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ರಾಜ್ಯದಲ್ಲಿ ವೈದ್ಯಾಧಿಕಾರಿಗಳನ್ನು ಈಗ ತಾನೆ ನಾವು ರಿಕ್ರೂಟ್‌ಮೆಂಟ್ ಮಾಡಿದ್ದೇವೆ. ಈ ವಿಚಾರದ ಬಗ್ಗೆ ಈಗಾಗಲೇ ಒಂದು ಪ್ರಶ್ನೆಗೆ ಉತ್ತರಿಸುತ್ತಾ ಹೇಳಿದ್ದೇನೆ. ಈಗ ಅವರ ವೈದ್ಯಕೀಯ ತಪಾಸಣೆಗಾಗಿ ಮತ್ತು ಪೋಲೀಸ್ ವೆರಿಫಿಕೇಶನ್‌ಗಾಗಿ ಹೋಗಿದೆ. ಅದು ಬಹುಶಃ ಈ ತಿಂಗಳೊಳಗಾಗಿ ಅಥವಾ ಬರುವ ತಿಂಗಳ ಮೊದಲನೇ ವಾರದಲ್ಲಿ ಬರಬಹುದು. ಆದಷ್ಟು ಬೇಗ ಅವರನ್ನು ತುಂಬಿಸಿಕೊಡುತ್ತೇವೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಆಸ್ಪತ್ರೆಗಳ ಲಿಸ್ಟನ್ನು ಏನು ಕೊಟ್ಟಿದ್ದಾರೆ, ಅದರಲ್ಲಿ ಚಿಕ್ಕಜೋಗಿಹಳ್ಳಿಯ ಜನರಲ್ ಆಸ್ಪತ್ರೆಯ ಹೆಸರಿಲ್ಲ. ಅಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎಂಬ ಬಗ್ಗೆಯೂ ಲಿಸ್ಟ್‌ನಲ್ಲಿ ಬಂದಿಲ್ಲ. ಇದು ಯಾವ ಕಾರಣದಿಂದಾಗಿ ಈ ಪಟ್ಟಿಯಲ್ಲಿ ಬಿಟ್ಟು ಹೋಗಿದೆ ಎಂಬುದು ಅರ್ಥವಾಗುತ್ತಿಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಬಹುಶಃ ಅದು ಟೈಪಿಂಗ್ ಎರರ್ ಇರಬಹುದು. ಅದನ್ನು ಸರಿಪಡಿಸುತ್ತೇನೆ.

ಬೆಂಗಳೂರಿನಲ್ಲಿರುವ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಬಗ್ಗೆ

16 - ಶ್ರೀ ಕೆ. ಲಕ್ಷ್ಮಣ್ (ಕುಣಿಗಲ್) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಸರ್ಕಾರಿ ಪ್ರಾರ್ಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಬಹುತೇಕ ಶಾಲೆಗಳಲ್ಲಿ ಅವಶ್ಯಕತೆ ಇರುವಷ್ಟೂ ಕೂಡ ಕಟ್ಟಡ ಹಾಗೂ ಪೀಠೋಪಕರಣಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಮಿರಿರುವ ಉಪಾಧ್ಯಾಯರುಗಳಿರುವ ಶಾಲೆಗಳ ಸಂಖ್ಯೆ ಎಷ್ಟು? ಈ ಸಂಖ್ಯೆಯನ್ನು ಸರಿದೂಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು) :

ಅ) ಬೆಂಗಳೂರು ನಗರದಲ್ಲಿರುವ ಸರ್ಕಾರಿ

ಪ್ರಾಥಮಿಕ ಶಾಲೆಗಲು - 944

ಪ್ರೌಢಶಾಲೆಗಳು 038

ಆ) ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) 109, 206 ಹೆಚ್ಚುವರಿ ಉಪಾಧ್ಯಾಯರುಗಳನ್ನು ಅವಶ್ಯವಿರುವ ಶಾಲೆಗಳಿಗೆ ವರ್ಗಾಯಿಸಲಾಗಿದೆ.

ಶ್ರೀ ಕೆ. ಲಕ್ಕಣ್ಣ ಬೆಂಗಳೂರು ನಗರದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಎಷ್ಟಿವೆ ಎಂದು ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಹಾಗೆಯೇ ಪ್ರೌಢಶಾಲೆಗಳ ಪ್ರಾಥಮಿಕ ಶಾಲೆಗಳ, ಕೊಠಡಿಗಳು ಮತ್ತು ಪೀಠೋಪಕರಣಗಳು ಇಲ್ಲದಿರುವ ಬಗ್ಗೆಯೂ ಕೇಳಿದ್ದೇನೆ. ಇವುಗಳ ಕೊರತೆ ಇರುವುದು ಸರಕಾರಕ್ಕೆ ಗೊತ್ತಿದೆಯೇ ಎಂದು ಕೇಳಿದ್ದಕ್ಕೆ ಗೊತ್ತಿದೆ ಎಂದು ಹೇಳಿದ್ದಾರೆ. ಹಾಗಾದರೆ ಇದನ್ನು ನಿವಾರಿಸಲು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಬೇಕಾಗಿ ಕೇಳಿಕೊಳ್ಳುತ್ತೇನೆ. ಹಾಗೆಯೇ ಹೆಚ್ಚಿಗೆ ಇರುವಂಥ ಉಪಾಧ್ಯಾಯರುಗಳನ್ನು ಎಲ್ಲಿ ಉಪಾಧ್ಯಾಯರು ಇಲ್ಲವೋ ಅಂಥ ಕಡೆಗಳಿಗೆ ವರ್ಗಾವಣೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಹಾಗೆ ವರ್ಗಾವಣೆಯನ್ನು ಯಾವಾಗ ಮಾಡಿದ್ದಾರೆ. ಎಂದು ಹೇಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೇ 9ನೇ ಹಣಕಾಸಿನ ಆಯೋಗದಿಂದ 1990-91 ನೇ ಸಾಲಿನಲ್ಲಿ ಸುಮಾರು 21.50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದು ಅದರಲ್ಲಿ 37 ಕೊಠಡಿಗಳನ್ನು ಬೆಂಗಳೂರು ನಗರದಲ್ಲಿ ತೆಗೆದುಕೊಳ್ಳುವುದಕ್ಕೆ ನಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

1990-91ನೇ ಇಸವಿಯಲ್ಲಿ ಯೋಜನೆಯಡಿಯಲ್ಲಿ ಸುಮಾರು 2 ಲಕ್ಷದ 20 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಸುಮಾರು 13 ಕೊಠಡಿಗಳನ್ನು ರಚನೆ ಮಾಡುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಇದಲ್ಲದೆ ಕಪ್ಪುಹಲಗೆ ಕಾರ್ಯಕ್ರಮದಡಿಯಲ್ಲಿ ಸುಮಾರು 40 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ 313 ಶಾಲಾ ಕೊಠಡಿಗಳನ್ನು ನಿರ್ಮಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೇವೆ. ಅದರ ಕೆಲವು ಈಗಾಗಲೇ ಪ್ರಾರಂಭವಾಗುತ್ತದೆ. ಪೀಠೋಪಕರಣಕ್ಕಾಗಿ ಸುಮಾರು 17 ಲಕ್ಷದ 22 ಸಾವಿರ ರೂಪಾಯಿಗಳನ್ನು ನಾವೂ ಮಂಜೂರು ಮಾಡಿದ್ದೇವೆ. ಆ ಕಾರ್ಯಕ್ರಮವೂ ಕೂಡ ಈಗ ನಡೆಯುತ್ತಿದೆ. ಇಷ್ಟಾದರೂ ಕೆಲಸಗಳು ಸಾಕಷ್ಟು ಆಗಿವೆ ಎಂದು ನಾನು ಹೇಳುವುದಿಲ್ಲ. ಇದು ಕೇವಲ ಬೆಂಗಳೂರು ನಗರದಲ್ಲಿ ಮಾತ್ರವಲ್ಲ, ಅನೇಕ ನಗರಗಳಲ್ಲಿ ಈ ಒಂದು ಕೊರತೆ ಇದೆ, ಏಕೆಂದರೆ ನಗರಗಳು ಜಿಲ್ಲಾಪರಿಷತ್‌ನ ಕಕ್ಷೆಯಲ್ಲಿ ಬರುವುದರಿಂದ ಅಲ್ಲಿ ಸರಿಯಾದಂಥ ವ್ಯವಸ್ಥೆಯಾಗಿಲ್ಲ ಎಂದು ದೂರುಗಳು ಬಂದಿದೆ. ಇದು ಬೆಂಗಳೂರು ನಗರಕ್ಕೂ ಅನ್ವಯವಾಗುತ್ತದೆ. ಪೇಟೆ ಪಟ್ಟಣಗಳು ಸುಂದರವಾಗಿ ಕಂಡರೂ ಕೂಡ ಅಲ್ಲಿನ ಶಾಲಾಕಾಲೇಜುಗಳ ಕಟ್ಟಡಗಳು ಬಹಳ ನಾದುರುಸ್ತಿಯಲ್ಲಿ ಇರುವುದು ಕಂಡು ಬಂದಿದೆ. ಅದಕ್ಕೆ ನಾವು ಈ ಕಾರ್ಯಕ್ರಮಗಳಲ್ಲದೆ

ಬೇರೆ ರೀತಿಯಲ್ಲಿ ಕೆಲವು ವಿಚಾರಗಳನ್ನು ಮಾಡಬೇಕೆಂದು ಸರ್ಕಾರ ಆಲೋಚನೆ ಮಾಡುತ್ತಾ ಇದೆ.

ಈ ಶಾಲಾ ಉಪಾಧ್ಯಾಯರ ವಿಚಾರದಲ್ಲಿ 109 ಶಾಲೆಗಳಲ್ಲಿ ಹೆಚ್ಚುವರಿ ಅಧ್ಯಾಪಕರು ಸುಮಾರು 206 ಮಂದಿ ಇದ್ದಾರೆ.ಇವರನ್ನು ಎಲ್ಲಿ ಶಾಲಾ ಅಧ್ಯಾಪಕರ ಕೊರತೆ ಇದೆ ಅಲ್ಲಿಗೆ ಪುನಃ ರೀಅಡ್ಜಸ್ಟ್ ಮಾಡಿ ವರ್ಗಾವಣೆ ಮಾಡುತ್ತೇವೆ.

ಶ್ರೀ ಕೆ. ಲಕ್ಷ್ಮಣ್ಣ : ರಾಜಾಜಿನಗರದಲ್ಲಿರುವ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಕೊಠಡಿಗಳಿಲ್ಲ ಪೀಠೋಪಕರಣಗಳಿಲ್ಲ. ಈ ಬಗ್ಗೆ ಕಳೆದ ವರ್ಷದಿಂದ ನಾನು ಕಾಗದ ಬರೆದಿದ್ದೇನೆ. ಕೆಲವು ಪ್ರೈಮರಿ ಶಾಲೆಗಳಲ್ಲಿ ಮಣೆಗಳೂ ಇಲ್ಲ. ಅಲ್ಲಿ ಶಾಲಾ ಅಭಿವೃದ್ಧಿ ಸಮಿತಿ ಇದೆ. ಅವರು ಆರ್ಥಿಕವಾಗಿ ಹಿಂದುಳಿದವರು. ಅವರು ಏನೂ ಮಾಡುವುದಕ್ಕೆ ಸಾಧ್ಯವಿಲ್ಲ ಅಂತಹ ಕಡೆ ಸೌಲಭ್ಯ ಒದಗಿಸುವುದು ಸರ್ಕಾರದ ನೀತಿ ಆಗಿರಬೇಕು. ಕರ್ತವ್ಯವಾಗಿರಬೇಕು. ಅಲ್ಲಿ ಓದತಕ್ಕ ಬಡಮಕ್ಕಳು, ಹರಿಜನ - ಗಿರಿಜನರ ಮಕ್ಕಳಿಗೆ ಮಣೆ ಸಹ ಇಲ್ಲ ಎಂದರೆ ಇದು ಯಾವ ಕಾರ್ಯಕ್ರಮ ಎಂದು ಮಾನ್ಯ ಸಚಿವರು ಹೇಳಬೇಕು. ಕೆಲವು ಪ್ರೌಢಶಾಲೆಗಳಲ್ಲಿ ವರ್ಷಾನುಗಟ್ಟಲೆ ಕೆಲವು ಸಬ್ಜೆಕ್ಟ್ ಟೀಚರ್‌ಗಳಿಲ್ಲ. ಅವರನ್ನು ಹಾಕಿಕೊಂಡಿ ಎಂದು ಸಂಬಂಧಿಸಿದವರನ್ನು ಕೇಳಿದರೆ ಇನ್ನೂ ಹಾಕಿಕೊಟ್ಟಿಲ್ಲ. ಹೆಣ್ಣೂರು ಬಾಣಸವಾಡಿಯ ಒಂದು ಸರ್ಕಾರಿ ಪ್ರೈಮರಿಶಾಲೆ ಶಾಲೆಯಲ್ಲಿ 8 ಮಕ್ಕಳಿಗೆ ಇಬ್ಬರು ಉಪಾಧ್ಯಾಯರಿದ್ದಾರೆ. ಅವರು ಸುಮ್ಮನೆ ಸಂಬಳ ತೆಗೆದುಕೊಳ್ಳುವಂತಾಗಿದೆ. ಕಡಿಮೆ ಇರುವಂಥ ಮಕ್ಕಳನ್ನು ಬೇರೆ ಕಡೆ ವರ್ಗಾಯಿಸಬೇಕು. ಈ ಟೀಚರ್‌ಗಳನ್ನು ಬೇರೆ ಶಾಲೆಗಳಿಗೆ ಹಾಕಿದರೆ ಉತ್ತಮ. ಈ ಬಗ್ಗೆ ಕಾಗದ ಬರೆದರೂ ಸರಿಪಡಿಸಿಲ್ಲ

(ಉತ್ತರ ಇಲ್ಲ)

ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳ ಬಗ್ಗೆ

121 ಶ್ರೀ ಬ್ಲೆಸಿಯಸ್ ಎಂ. ಡಿಸೋಜಾ (ಮಂಗಳೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು?*

ಆ) *ಪ್ರತಿಯೊಂದು ಕಾಲೇಜಿನಲ್ಲಿ 1988-89 1989-90 ಮತ್ತು 1990-91ನೇ ಸಾಲಿಗೆ ಇರುವ ಸೀಟುಗಳ ಸಂಖ್ಯೆ ಎಷ್ಟು?*

ಇ) *ಪ್ರತಿಯೊಂದು ವೈದ್ಯಕೀಯ ಕಾಲೇಜಿಗೆ ಸೇರಿರುವ ಆಸ್ಪತ್ರೆಯ ಹೆಸರಿನೊಂದಿಗೆ ಇರುವ ಹಾಸಿಗೆ ಸಾಮರ್ಥ್ಯದ ಸಂಖ್ಯೆ ಎಷ್ಟು?*

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮಂತ್ರಿಗಳು)

ಅ) ಸರ್ಕಾರಿ ವೈದ್ಯಕೀಯ ಕಾಲೇಜುಗಳು - 4

ಖಾಸಗಿ ವೈದ್ಯಕೀಯ ಕಾಲೇಜುಗಳು 14

ಒಟ್ಟು 18

ಆ) ಪ್ರತ್ಯೇಕ ಪಟ್ಟಿಯನ್ನು ಲಗತ್ತಿಸಿದೆ.

ಇ) ಪ್ರತ್ಯೇಕ ಪಟ್ಟಿಯನ್ನು ಲಗತ್ತಿಸಿದೆ.